

# ಗಿನ್ನೆಸ್ ಗಿಟಾರ್!




ಮನಸ್ಸಿನ ಸಂತೋಷಕ್ಕಾಗಿ ದೈತ್ಯ ಗಾತ್ರದ ವಾದ್ಯಗಳನ್ನು ತಯಾರಿಸಿ ಅವನ್ನು ನುಡಿಸಿದಾಗ ಆಗುವ ಆನಂದ ಅಪರಿಮಿತ ಎನ್ನುತ್ತಾನೆ ಮಿಚಿಗನ್‌ನ ಲಾರೆನ್ಸ್ ಸ್ಟಂಪ್ಸ್. ಆತ ಗಿಟಾರ್ (ಯುಕುಲೆಲೆ) ವಾದನದಲ್ಲಿ ಪ್ರವೀಣ. ಆರು ಅಡಿ ಉದ್ದವಿರುವ ನಾಲ್ಕು ತಂತಿಗಳ ಚೀನಾ ದೇಶದ ಒಂದು ಗಿಟಾರ್ ಜಾಗತಿಕ ದಾಖಲೆ ಸ್ಥಾಪಿಸಿತು. ಈ ವಿಚಾರ ತಿಳಿದಾಗ ಅದಕ್ಕಿಂತ ದೊಡ್ಡದನ್ನು ತಾನು ತಯಾರಿಸಬೇಕೆಂಬ ಹಂಬಲ ಅವನ ಮನದಲ್ಲಿ ಹುಟ್ಟಿತಂತೆ. ಆದರೆ ಅದು ಭಾರವಾಗಿದ್ದರೆ ಎತ್ತಿ ನುಡಿಸುವುದು ಕಷ್ಟ. ಅದಕ್ಕಾಗಿ ಹಗುರವಾದ ಪ್ಲೈವುಡ್ ಮತ್ತು ನಾಲ್ಕು ತಂತಿಗಳನ್ನು ಬಳಸಿ ನಿರ್ಮಿಸಿದ. ಈ ವಾದ್ಯಕ್ಕಾಗಿ ಅವನು ಮಾಡಿದ ಖರ್ಚು 42 ಸಾವಿರ ರೂಪಾಯಿ (ಆರು ನೂರು ಡಾಲರು)ಗಳು. ಮೂರು ತಿಂಗಳ ಪರಿಶ್ರಮವೂ ಬೇಕಾಯಿತು.

ಹದಿಮೂರು ಅಡಿ ಉದ್ದವಿರುವ ಈ ಗಿಟಾರ್ ನಾಲ್ಕು ಅಡಿಗಿಂತ ಅಗಲ, ಒಂದು ಅಡಿಗಿಂತ ದಪ್ಪವಾಗಿದೆ. ನಾಲ್ಕು ನುಡಿತದ ಗೂಟಗಳಿವೆ. 2017ರಲ್ಲಿ ಇದು ಗಿನ್ನೆಸ್ ವಿಶ್ವದಾಖಲೆಗೂ ಸೇರಿದೆ. ಧ್ವನಿವರ್ಧಕವಿಲ್ಲದೆಯೂ ಇದರ ನಾದ ಸಭಾಮಂದಿರವನ್ನು ತುಂಬಲು ಸಶಕ್ತವಾಗಿದೆ.




■ ಪ. ರಾಮಕೃಷ್ಣ ಶಾಸ್ತ್ರಿ